/



ಉಪತಹಶೀಲ್ದಾರವರ ನ್ಯಾಯಾಲಯ ನಾಡ ಕಛೇರಿ ಗುಡೇಕೋಟೆ

ಸಂ/ಕಂ/ಹ.ಬ./ನಾ.ಕ.ಗು/25/2014-15.

ದಿನಾಂಕ:12-04-2016.

| ಅರ್ಜಿದಾರರು | ತಕರಾರುದಾರರು |
|---|---|
| 1)ಈರಣ್ಣ ತಂದೆ ಲೇಟ್ ಕರಿಚಿತ್ತಪ್ಪ<br>2)ತಿಮ್ಮಕ್ಕ ಗಂಡ ಲೇಟ್ ಯರ್ರಿಬಾಲಪ್ಪ<br>3)ಕುಂಟೀರಪ್ಪ ತಂದೆ ಲೇಟ್ ಬಾಲಪ್ಪ<br>4)ದೊಡ್ಡಬಾಲಪ್ಪ ತಂದೆ ದೊಡ್ಡಳ್ಳಿ ವೀರಪ್ಪ<br>5)ಕುಂಟದೊಡ್ಡಪ್ಪ ತಂದೆ ದೋಡ್ಡಳ್ಳಿ ವೀರಪ್ಪ<br>6)ಯಶೋದಮ್ಮ ಗಂಡ ಲೇಟ್ ಸಣ್ಣ ದೊಡ್ಡಪ್ಪ<br>ಮಾಡ್ಲಾಕನಹಳ್ಳಿ ಗೊಲ್ಲರಹಟ್ಟಿ ಗ್ರಾಮ<br>ಕೂಡ್ಲಿಗಿ ತಾಲೂಕು | 1)ಎನ್.ಎಂ.ರವಿರಾಜ್ ತಂದೆ ಲೇಟ್ ಎನ್. ಎಂ. ನಾಗರಾಜ್<br>2)ಎನ್.ಎಂ.ವಿಜಯಕುಮಾರ ತಂದೆ ಲೇಟ್ ಎನ್. ಎಂ.ನಾಗರಾಜ್<br>3)ಎನ್.ಎಂ.ಕಾಂಚನ ತಂದೆ ಲೇಟ್ ಎನ್.ಎಂ. ನಾಗರಾಜ್<br>ಹಿರೇಕೆರೆಹಳ್ಳಿ ಗ್ರಾಮ (ಪೋ)<br>ಮೋಳಕಾಲ್ಮೂರು ತಾಲೂಕು<br>ಚಿತ್ರದುರ್ಗ ಜಿಲ್ಲಾ |
| **ಕೂಡ್ಲಿಗಿ ತಾಲೂಕು ಕಡೇಕೊಳ್ಳ ಗ್ರಾಮದ ಸನಂ 376ಹೆಚ್. ವಿಸ್ತೀರ್ಣ 16-87.ಎಕ್ರೆ ಜಮೀನನ್ನು ಪೋತಿವಾರಸು ಪ್ರಕಾರ** ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಕಡೇಕೊಳ್ಳ ಗ್ರಾಮದ ಸನಂ 376ಹೆಚ್. ವಿಸ್ತೀರ್ಣ 16-87.ಎಕ್ರೆ ಜಮೀನನ್ನು ಸದರಿ ತಾಲೂಕು ಮಾಡ್ಲಾಕನಹಳ್ಳಿ ಗೊಲ್ಲರಹಟ್ಟಿ ಗ್ರಾಮದ ಈರಣ್ಣ ತಂದೆ ಲೇಟ್ ಕರಿಚಿತ್ತಪ್ಪ ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಕಡೇಕೊಳ್ಳ ಇವರು ನಮೂನೆ-21 ರ ನೋಟಿಸನ್ನು ದಿನಾಂಕ:-28-01-2014 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಚಿತ್ರದುರ್ಗ ಜಿಲ್ಲಾ ಮೊಳಕಾಲ್ಮೂರು ತಾಲೂಕು ಹಿರೇಕೆರೆಹಳ್ಳಿ ಗ್ರಾಮದ ಎನ್.ಎಂ.ರವಿರಾಜ್.ಎನ್.ಎಂ. ವಿಜಯಕುಮಾರ. ಎನ್.ಎಂ.ಕಾಂಚನಾ ತಂದೆ ಲೇಟ್ ಎನ್.ಎಂ.ನಾಗರಾಜ್ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಪ್ರಕರಣವನ್ನು ಎಂ.ಆರ್. ನಂಬರ್: 16/2013-14. ದಿನಾಂಕ:-28-02-2014 ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸು ನೀಡಿ ದಿನಾಂಕ: 30-09-2014 ರಿಂದ 10-05-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಗೂ ಅವರ ಪರ ನ್ಯಾಯಾವಾದಿಗಳು ಮತ್ತು ತಕರಾರುದಾರರು ಹಾಜರಾಗಿರುತ್ತಾರೆ. ಅರ್ಜಿದಾರರ ಪರ ನ್ಯಾಯಾವಾದಿಗಳು ಕಡೇಕೊಳ್ಳ ಗ್ರಾಮದ ಸನಂ 376ಹೆಚ್. ವಿಸ್ತೀರ್ಣ 16-87.ಎಕ್ರೆ ಜಮೀನು ಅರ್ಜಿದಾರರ ಅಜ್ಜನವರಾದ ಗೊಲ್ಲರ ದೊಡ್ಡಬಾಲಪ್ಪ. ಹಳ್ಳಿಬಾಲಪ್ಪ ತಂದೆ ಬಾಲಪ್ಪ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇರುತ್ತದೆ. ಇವರ ಒಂದನೆ ಅಜ್ಜನಾದ ದೊಡ್ಡಬಾಲಪ್ಪ ಇವರು ದಿನಾಂಕ 18-04-1940 ರಂದು ಹಾಗೂ ಅಜ್ಜಿ ವೀರಮ್ಮ ಗಂಡ ದೊಡ್ಡಬಾಲಪ್ಪ ಇವರು 07-06-1945 ರಂದು ಎರಡನೇ ಅಜ್ಜನಾದ ಬಾಲಪ್ಪ ತಂದೆ ದೊಡ್ಡಬಾಲಪ್ಪ ಇವರು ದಿನಾಂಕ 24-03-1965 ರಂದು ಹಾಗೂ ಅಜ್ಜಿ ಈರಜ್ಜಿ ಗಂಡ ಬಾಲಪ್ಪ ಇವರು ದಿನಾಂಕ 13-07-1967 ರಂದು ಹಾಗೂ ಮೂರನೇ ಅಜ್ಜನಾದ ಈರಪ್ಪ ತಂದೆ ದೊಡ್ಡಬಾಲಪ್ಪ ಇವರು ದಿನಾಂಕ 19-08-1994 ರಂದು ಇವರ ಹೆಂಡತಿ ಕಲ್ಲಮ್ಮ ಗಂಡ ಈರಪ್ಪ ಇವರು ದಿನಾಂಕ 18-04-2000 ರಂದು ನಿಧನ ಹೊಂದಿರುತ್ತಾರೆ. ಕಾರಣ ಪೋತಿವಾರಸು ಹಕ್ಕಿನ ಪ್ರಕಾರ ಅರ್ಜಿದಾರರ ಹೆಸರಲ್ಲಿ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಹಾಜರಾಗಿದ್ದು ನಾವು ಎಕ್ಕೆಗುಂದಿ ಗ್ರಾಮದ ಸನಂ 108/1 ವಿಸ್ತೀರ್ಣ 5-00 ಎಕ್ರೆ ಜಮೀನಿಗೆ ಸಂಬಂದಿಸಿದಂತೆ ತಕರಾರು ಅರ್ಜಿ ಸಲ್ಲಿಸಿದ್ದು ಕಡೇಕೊಳ್ಳ ಗ್ರಾಮದ ಸನಂ 376ಹೆಚ್.ವಿಸ್ತೀರ್ಣ 16-87 ಎಕ್ರೆ ಜಮೀನಿನ ಎಂ.ಆರ್.ನಂಬರ್: 16/2013-14 ವಹಿವಾಟು ಸಂಖ್ಯೆ 35ಕ್ಕೆ ಯಾವುದೇ ರೀತಿಯ ಸಂಬಂಧವಿಲ್ಲವೆಂದು ತಿಳಿಸಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಪರ ನ್ಯಾಯಾವಾದಿಗಳ ಹೇಳಿಕೆ ತಕರಾರುದಾರರ ಹೇಳಿಕೆಗಳನ್ನು ಕೇಳಿ ಮರಣ ಪ್ರಮಾಣ ಪತ್ರ ಮತ್ತು ವಂಶವೃಕ್ಷಕ್ಕೂ ಹಾಗೂ ತಕರಾರು ಅರ್ಜಿಗೂ ತಾಳೆಯಿಲ್ಲದ ಕಾರಣ ಹಾಗೂ ಸದರಿ ಜಮೀನಿನ ಬಗ್ಗೆ ಕಂದಾಯ ಪರಿವೀಕ್ಷಕರು ಗುಡೇಕೋಟೆ ಇವರು ಗ್ರಾಮದಲ್ಲಿ ಮರು ವಿಚಾರಣೆ ಮಾಡಲಾಗಿ ತಕರಾರು ಅರ್ಜಿಗೂ ಹಕ್ಕು ಬದಲಾವಣೆ ಮಾಡಲು ಕೋರಿರುವ ಅರ್ಜಿಗೂ ಯಾವುದೇ ರಿತೀಯ ಸಂಬಂಧವಿಲ್ಲವೆಂದು ಕಂಡು ಬಂದ ಕಾರಣ ಯಥಾಸ್ಥಿತಿಯಂತೆ ಮುಂದುವರೆಸಲು ವರದಿ ಸಲ್ಲಿಸಿರುತ್ತಾರೆ. ಸದರಿಯವರ ವರದಿ ಆಧಾರದ ಮೇಲೆ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

**-:ಆದೇಶ:-**

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಸ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಕಡೇಕೊಳ್ಳ ಗ್ರಾಮದ ಸನಂ 376ಹೆಚ್. ವಿಸ್ತೀರ್ಣ 16-87.ಎಕ್ರೆ ಜಮೀನಿನ ಪೋತಿವಾರಸು ಹಕ್ಕಿನ ಪ್ರಕಾರ ಕೋರಿರುವ ಅರ್ಜಿಗೂ ತಕರಾರು ಅರ್ಜಿಗೂ ಯಾವುದೇ ರಿತೀಯ ಸಂಬಂಧವಿಲ್ಲವೆಂದು ಕಂಡು ಬಂದ ಕಾರಣ ಹಾಗೂ ಅರ್ಜಿದಾರರು ಸೂಕ್ತ ದಾಖಲೆಗಳನ್ನು ಸಲ್ಲಿಸಿಲ್ಲದ ಕಾರಣ ಅರ್ಜಿದಾರರ ಕೋರಿಕೆಯನ್ನು ತಳ್ಳಿಹಾಕುತ್ತಾ ಯತಾಸ್ಥಿತಿಯಂತೆ ಮುಂದುವರಿಸಲು ಆದೇಶಿಸಿ ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ಈ ಹಂತದಲ್ಲಿ ಮುಕ್ತಾಯಗೊಳಿಸಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ: 10-05-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಗುಡೇಕೋಟೆ
ಗುಡೇಕೋಟೆ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಈರಣ್ಣ ತಂದೆ ಕರಿಚಿತ್ತಪ್ಪ ಹಾಗೂ ಇತರರು ಮಾಡ್ಲಾಕನಹಳ್ಳಿ ಗೊಲ್ಲರಹಟ್ಟಿ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಬಿ.ನಾಗರಾಜ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಎನ್.ಎಂ.ರವಿರಾಜ್ .ಎನ್.ಎಂ.ವಿಜಯಕುಮಾರ. ಎನ್.ಎಂ.ಕಾಂಚನಾ ತಂದೆ ಲೇಟ್ ಎನ್.ಎಂ.ನಾಗರಾಜ ಹಿರೆಕೆರೆಹಳ್ಳಿ ಗ್ರಾಮ ಮೊಳಕಾಲ್ಮೂರು ತಾಲೂಕು ಚಿತ್ರದುರ್ಗ ಜಿಲ್ಲಾ ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕೆ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.